# Current affairs of 2018-07-31 by KPSCVAANI.com

## * ಗಣಿತ, ವಿಜ್ಞಾನದಲ್ಲಿ ಕನ್ನಡದ ಮಕ್ಕಳು ಶೈನಿಂಗ್



ಶಾಲಾ ವಿದ್ಯಾರ್ಥಿಗಳ ಗಣಿತ ಮತ್ತು ವಿಜ್ಞಾನ ಪ್ರತಿಭೆಗೆ ಸಂಬಂಧಿಸಿದಂತೆ ಕರ್ನಾಟಕ ದೇಶದಲ್ಲೇ ಅಗ್ರ ಸ್ಥಾನ ಪಡೆದುಕೊಂಡಿದೆ. ಕೇಂದ್ರ ಮಾನವ ಸಂಪನ್ಮೂಲ ಸಚಿವಾಲಯದ ವತಿಯಿಂದ ನಡೆಸಲಾದ ರಾಷ್ಟ್ರೀಯ ಸಾಧನಾ ಸಮೀಕ್ಷೆಯಲ್ಲಿ (ಎನ್‌ಎಎಸ್) ರಾಜ್ಯದ ಮಕ್ಕಳ ಪ್ರಾವೀಣ್ಯತೆ ಸಾಬೀತಾಗಿದೆ. ರಾಷ್ಟ್ರೀಯ ಸಾಧನಾ ಸಮೀಕ್ಷೆಯ ವರದಿ : * ಮಕ್ಕಳು ಆರಂಭದಲ್ಲಿ ಗಣಿತ, ವಿಜ್ಞಾನದಲ್ಲಿ ಚುರುಕು * ಮೇಲಿನ ತರಗತಿಗೆ ಹೋದಂತೆ ಈ ವಿಷಯಗಳಲ್ಲಿ ಹಿಡಿತ ಕಡಿಮೆ * 3, 5, 8ನೇ ತರಗತಿ ವಿದ್ಯಾರ್ಥಿಗಳ ಮೇಲೆ ಸಮೀಕ್ಷೆ * ಸರಕಾರಿ ಮತ್ತು ಅನುದಾನಿತ ಶಾಲೆಗಳ ಮಕ್ಕಳು ಭಾಗಿ * ಕರ್ನಾಟಕ ಮತ್ತು ಜಾರ್ಖಂಡ್ ನಲ್ಲಿ ಮಕ್ಕಳಲ್ಲಿ ಕುಗ್ಗದ ಪ್ರತಿಭೆ * ಗಣಿತ: ಕರ್ನಾಟಕ, ರಾಜಸ್ಥಾನ ಟಾಪರ್ * 75%: 3ನೇ ತರಗತಿ ವಿದ್ಯಾರ್ಥಿಗಳು ಗಣಿತದಲ್ಲಿ ನೀಡಿದ ಸರಿಯಾದ ಉತ್ತರಗಳ ಪ್ರಮಾಣ. * 67%: 5ನೇ ತರಗತಿಯಲ್ಲಿ ವಿದ್ಯಾರ್ಥಿಗಳ ಸರಾಸರಿ ಸರಿ ಉತ್ತರಗಳ ಪ್ರಮಾಣ. * 51%: 8ನೇ ತರಗತಿಯಲ್ಲಿ ಗಣಿತ ಪ್ರಶ್ನೆಗಳಿಗೆ ಸರಿಯಾದ ಸರಾಸರಿ ಉತ್ತರ * 58%: 8ನೇ ತರಗತಿಯಲ್ಲಿ ಗಣಿತ ಪ್ರಶ್ನೆಗಳಿಗೆ ರಾಜಸ್ಥಾನ ವಿದ್ಯಾರ್ಥಿಗಳ ಸರಿ ಉತ್ತರ * ವಿಜ್ಞಾನ: ಕರ್ನಾಟಕ, ಜಾರ್ಖಂಡ್ – ಅಗ್ರಸ್ಥಾನ * 53%: ವಿಜ್ಞಾನ ಪ್ರಶ್ನೆಗಳಿಗೆ ಕರ್ನಾಟಕದ, ಜಾರ್ಖಂಡ್ ಮಕ್ಕಳ ಸರಿ ಉತ್ತರ * 31%: ಅತ್ಯಂತ ಕಡಿಮೆ – ಉತ್ತರದೊಂದಿಗೆ ಪುದುಚೆರಿಗೆ ಕನಿಷ್ಠ ಸ್ಥಾನ

## * ಕೃಪ ತಂತ್ರಾಂಶ

ರೈತರು ಬೆಳೆದ ಕೃಷಿ ಉತ್ಪನ್ನಗಳನ್ನು ಪೇಟಿಧಾರಣೆ ಏರಿಳಿತ ಆಧರಿಸಿ ಮಾರಾಟ ಮಾಡಲು ಸಹಕಾರಿಯಾಗುವ ಬೆಲೆ ಮುನ್ನಂದಾಜಿಗೆ 'ಕೃಪ' ತಂತ್ರಾಂಶವನ್ನು ರಾಜ್ಯ ಕೃಷಿ ಬೆಲೆ ಆಯೋಗ ಆವಿಷ್ಕರಿಸಿದೆ. ನೂತನ ತಂತ್ರಾಂಶಮ ಕೃಷಿ ಧಾರಣಾ ವಿಶ್ಲೇಷಣೆ ಫಲಕ (ಕೃಪ)ವಾಗಿ ಕಾರ್ಯನಿರ್ವಹಿಸಲಿದೆ. ಏನಿದು ಕೃಪ ತಂತ್ರಾಂಶ ? 2012 ರಿಂದ ಈವರೆಗೆ ರಾಜ್ಯದ 159 ಮಾರುಕಟ್ಟೆಗಳಲ್ಲಿನ 199 ಕೃಷಿ ಉತ್ಪನ್ನಗಳ ಆವಕ, ಮಾರಾಟ ದರದ ವಿವರಗಳು ಇವೆ. ಆಯಾ ಮಾರುಕಟ್ಟೆಗಳಲ್ಲಿ ಹಿಂದಿನ ದಿನದವರೆಗಿನ ಧಾರಣೆ ವಿವರಗಳನ್ನು ಅಡಕ ಮಾಡಲಾಗಿದೆ. ಮಾರುಕಟ್ಟೆ, ಉತ್ಪನ್ನ, ಮಾಸ/ವರ್ಷವಾರು ವಿವರಗಳನ್ನು ತುಲನೆ ಮಾಡಿ ಆಯಾ ಬೆಳೆಗಳ ದರ ಮಾರಾಟಕ್ಕೆ ಅಣಿಯಾಗಬಹುದು. ಮುಂದಿನ ಮೂರು ತಿಂಗಳ ಮಟ್ಟಿಗೆ ಮುನ್ನಂದಾಜು ಮಾಡುವ ಮಾಹಿತಿ ಸಿಗುವುದರಿಂದ ರೈತರು ಬೆಳೆ ನಷ್ಟಕ್ಕೆ ಒಳಗಾಗುವ ಸಾಧ್ಯತೆ ಇರುವುದಿಲ್ಲ. ಪ್ರತ್ಯೇಕ ಘಟಕ ಸ್ಥಾಪನೆ : ಈ ತಂತ್ರಾಂಶವನ್ನು ನಿರಂತರವಾಗಿ ನಿಗಾ ಇಡುವ ವ್ಯವಸ್ಥೆಗಾಗಿ ರಾಜ್ಯದ ಐದು ಕೃಷಿ/ತೋಟಗಾರಿಕೆ ವಿವಿಗಳಲ್ಲಿ ಪ್ರತ್ಯೇಕ ಘಟಕ ಸ್ಥಾಪನೆಯಾಗಲಿದೆ. ಮಾರುಕಟ್ಟೆ ತಜ್ಞರು, ಬೆಲೆ ಆಯೋಗದ ಸಿಬ್ಬಂದಿ ಹಾಗೂ ವಿವಿ ಪ್ರತಿನಿಧಿಗಳಿರುತ್ತಾರೆ. ಉಪಯೋಗವೇನು ? ಈ ತಂತ್ರಾಂಶವನ್ನು ಬಳಸಿಕೊಂಡು ರೈತರು ತಾಮ ಬೆಳೆದ ಬೆಳೆಗೆ ಲಾಭದಾಯಕ ಬೆಲೆಯನ್ನು ಪಡೆದುಕೊಳ್ಳಬಹುದು. ದಲ್ಲಾಳಿಗಳ ಕಾಟದಿಂದ ವಿಮುಕ್ತಿ ಪಡೆದು ವಹಿವಾಟಿನ ಪೂರ್ಣ ಹಣವನ್ನು ರೈತರು ಪಡೆದುಕೊಳ್ಳಲು ಸಾಧ್ಯವಾಗುವ ವ್ಯವಸ್ಥೆಗೆ ತಂತ್ರಾಂಶ ನಾಂದಿಯಾಗಲಿದೆ. ರೈತನೇ ಮಾರುಕಟ್ಟೆ ಜ್ಞಾನದಿಂದ ತನ್ನ ಮಾಲನ್ನು ಉತ್ತಮ ದರ ಇದ್ದಾಗ ಬಿಕರಿಗೆ ನಿರ್ಧರಿಸಬಹುದಾಗಿದೆ. 18 ತಿಂಗಳ ಶ್ರಮ : ಇಂಥದ್ದೊಂದು ಸುಧಾರಿತ ಹಾಗೂ ಬೆರಳ ತುದಿಯಲ್ಲಿ ನಿಖರ ಮಾಹಿತಿಯುಳ್ಳ ತಂತ್ರಾಂಶ ಸಿದ್ಧಪಡಿಸುವ ಬೆಲೆ ಆಯೋಗದ ಆಲೋಚನೆಗೆ ಐಟಿ ದಿಗ್ಗಜ ಮೈಕ್ರೋಸಾಫ್ಟ್ ಸಾಥ್ ನೀಡಿದೆ. ಬೆಂಗಳೂರಿನ ಆವಂತಿಕಾ ಕಂಪನಿ ಹಾಗೂ ಪಶುವೈದ್ಯ ವಿವಿಯ ಡೇರಿ ವಿಭಾಗದ ತಂತ್ರಜ್ಞರು ಸಹಕಾರ ನೀಡಿದ್ದು, ಬರೋಬ್ಬರಿ 18 ತಿಂಗಳು ಶ್ರಮ ಪಡಲಾಗಿದೆ. ಇದನ್ನೀಗ ನಿರಂತರವಾಗಿ ಮೇಲ್ವಿಚಾರಣೆ ನಡೆಸಲು ಐಬಿಎಂ ಮುಂದೆ ಬಂದಿದೆ.

## * ಹೊಸ ರಕ್ಷಣಾ ನೀತಿ




ರಕ್ಷಣಾ ಕ್ಷೇತ್ರಕ್ಕೆ ಸಂಬಂಧಿಸಿದ ಕೈಗಾರಿಕೆಗಳಿಗೆ ಉತ್ತೇಜನ ನೀಡುವ ಉದ್ದೇಶದಿಂದ ಕೇಂದ್ರ ಸರ್ಕಾರ ಮುಂದಿನ ತಿಂಗಳು ಮಹತ್ವದ ನೀತಿಯೊಂದನ್ನು ಬಿಡುಗಡೆ ಮಾಡಲಿದೆ. ಉದ್ಯಮದ ಅಭಿವೃದ್ಧಿಗೆ ಸಂಬಂಧಿಸಿದ ಮಾರ್ಗಸೂಚಿಯನ್ನು ಇದು ಒಳಗೊಂಡಿರಲಿದೆ. ಮುಂದಿನ 10 ವರ್ಷಗಳಲ್ಲಿ ಮಿಲಿಟರಿ ಸಾಮಗ್ರಿಗಳ ಉತ್ಪಾದನೆಯಲ್ಲಿ ವಿಶ್ವದ ಅಗ್ರ 5 ದೇಶಗಳ ಪಟ್ಟಿಗೆ ಭಾರತವನ್ನು ಸೇರಿಸುವುದು ಸರ್ಕಾರದ ಗುರಿಯಾಗಿದೆ. ಅತ್ಯಾಧುನಿಕ, ಸೂಕ್ಷ್ಮ ತಂತ್ರಜ್ಞಾನಗಳನ್ನು ಒಳಗೊಂಡಿರುವ ಯುದ್ಧವಿಮಾನ, ಮಿಲಿಟರಿ ಹೆಲಿಕಾಪ್ಟರ್, ದೊಡ್ಡ ಪ್ರಮಾಣ ದಲ್ಲಿ ಶಸ್ತ್ರಾಸ್ತ್ರ ತಯಾರಿಕೆಗೆ ಅಗತ್ಯವಾಗಿರುವ ಬಂಡವಾಳ, ಸಂಪನ್ಮೂಲಗಳನ್ನು ಅಭಿವೃದ್ಧಿ ಹಾಗೂ ಸಂಶೋಧನಾ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ರಕ್ಷಣಾ ಉತ್ಪಾದನಾ ನೀತಿ (ಡಿಡಿಪಿ-2018) ಎಂದು ಇದಕ್ಕೆ ಹೆಸರಿಡಲಾಗಿದೆ. ಟಾರ್ಗೆಟ್ 2025 : ಭಾರತ 2025ರ ವೇಳೆಗೆ ಭದ್ರತಾ ಉಪಕರಣಗಳ ಕ್ಷೇತ್ರದಲ್ಲಿ 11.70 ಲಕ್ಷ ಕೋಟಿ ವಹಿವಾಟು ನಡೆಸುವ ಗುರಿ ಹೊಂದಿದೆ. ಭದ್ರತಾ ಉಪಕರಣಗಳಿಗೆ ಸಂಬಂಧಿಸಿದ ಹಾರ್ಡ್‌ವೇರ್ ಆಮದು ಮಾಡಿಕೊಳ್ಳುವಲ್ಲಿ ಭಾರತ ವಿಶ್ವದಲ್ಲೇ ಮೊದಲ ಸ್ಥಾನದಲ್ಲಿದೆ. ಶಸ್ತ್ರಾಸ್ತ್ರ ಆಮದಿನಲ್ಲೂ ಕಳೆದ ನಾಲ್ಕು ವರ್ಷಗಳಲ್ಲಿ ಶೇ. 111 ಏರಿಕೆ ಕಂಡಿದೆ. ಇಂಥ ಉಪಕರಣಗಳನ್ನು ದೇಶದಲ್ಲೇ ಉತ್ಪಾದನೆ ಮಾಡಿದರೆ ಸರ್ಕಾರಕ್ಕೆ ಆರ್ಥಿಕ ಹೊರೆ ತಪ್ಪುತ್ತದೆ ಎಂಬುದು ತಜ್ಞರ ಲೆಕ್ಕಾಚಾರವಾಗಿದೆ. ನೀತಿಯಲ್ಲಿ ಏನಿದೆ ? 2025ರ ವೇಳೆಗೆ 35,000 ಕೋಟಿ ರಕ್ಷಣಾ ಸಾಮಗ್ರಿ ರಫ್ತು ಗುರಿ. ಯುದ್ಧವಿಮಾನ, ಮಧ್ಯಮ ಹಾಗೂ ಯುಟಿಲಿಟಿ ಹೆಲಿಕಾಪ್ಟರ್, ಯುದ್ಧ ಹಡಗು, ಯುದ್ಧ ಟ್ಯಾಂಕ್ ಹಾಗೂ ವಾಹನಗಳು, ಕ್ಷಿಪಣಿ ವ್ಯವಸ್ಥೆ, ಸ್ಫೋಟಕ, ಶಸ್ತ್ರಾಸ್ತ್ರಗಳು, ಬೇಹುಗಾರಿಕೆ ವ್ಯವಸ್ಥೆ, ಇಲೆಕ್ಟ್ರಾನಿಕ್ ಯುದ್ಧೋಪಕರಣ ಸೇರಿ 12 ಉತ್ಪನ್ನಗಳ ಉತ್ಪಾದನೆ, ಮಿತ್ರರಾಷ್ಟ್ರಗಳಿಗೆ ಮಾರಾಟದ ಗುರಿ. ರಕ್ಷಣಾ ಕೈಗಾರಿಕೆ ಸ್ಥಾಪನೆಗೆ ಪರವಾನಗಿ ನೀಡಿಕೆ ಸರಳ. ಶಸ್ತ್ರಾಸ್ತ್ರ ಆಮದು ಟಾಪ್-5 ದೇಶಗಳು : 1.ಭಾರತ,2. ಸೌದಿ ಅರೇಬಿಯಾ 3.ಯುಎಇ, 4. ಚೀನಾ 5. ಆಸ್ಟ್ರೇಲಿಯಾ ಶಸ್ತ್ರಾಸ್ತ್ರ ರಫ್ತು ಟಾಪ್-5 ದೇಶಗಳು : 1.ಅಮೆರಿಕ, 2. ರಷ್ಯಾ 3. ಬ್ರಿಟನ್, 4. ಫ್ರಾನ್ಸ್ 5. ಜರ್ಮನಿ

## * ಭಾರತ ಮೂಲದ ಅಮೆರಿಕ ಪ್ರಜೆಯಾಗಿರುವ ಸೀಮಾ ನಂದಾ ಇತ್ತೀಚೆಗಷ್ಟೇ ಅಮೆರಿಕದ ಡೆಮಾಕ್ರಟಿಕ್ ಪಾರ್ಟಿಯ ನ್ಯಾಷನಲ್ ಡೆಮಾಕ್ರಟಿಕ್ ಕಮಿಟಿಯ ಸಿಇಒ ಆಗಿ ನೇಮಕಗೊಂಡಿದ್ದಾರೆ.

ರಾಷ್ಟ್ರೀಯ ಮಟ್ಟದಲ್ಲಿ 'ಐ ವಿಲ್ ಓಟ್" ಪ್ರಚಾರ ಕೈಗೊಂಡಿದ್ದು, 50 ರಾಜ್ಯಗಳಿಂದ 50 ದಶಲಕ್ಷ ಮತದಾರರು ಪಾಲ್ಗೊಳ್ಳುವಂತೆ ಮಾಡಬೇಕು ಎಂದು ನಂದಾ ಕರೆ ನೀಡಿದ್ದಾರೆ.

## * ಸಾವಿರ ವರ್ಷ ಪುರಾತನ ದುಂಡು ಹುಳು ಪತ್ತೆ

ಸುಮಾರು 42 ಸಾವಿರ ವರ್ಷಗಳ ಹಿಂದಿನ ಎರಡು ದುಂಡುಹುಳುಗಳನ್ನು ಪತ್ತೆ ಹಚ್ಚಿರುವುದಾಗಿ ರಷ್ಯಾದ ಡೊಕ್ಲಾಡಿ ಬಯೋಲಾಜಿಕಲ್ ಸೈನ್ಸಸ್ ಸಂಸ್ಥೆಯು ಪ್ರಕಟಿಸಿದೆ. ಈ ಹುಳಗಳು ಆಶ್ಚರ್ಯಕರ ರೀತಿಯಲ್ಲಿ ಪೆಟ್ರಿ ಡಿಶ್ (ಗಾಜಿನ ತಟ್ಟೆ)ಯಲ್ಲಿ ಮರುಜೀವ ಪಡೆದು ಕೊಂಡಿವೆ. ಈ ಅಧ್ಯಯನಕ್ಕೆ ವಿಜ್ಞಾನಿಗಳು 300 ಇತಿಹಾಸ ಪೂರ್ವದ ಹುಳುಗಳನ್ನು ತಮ್ಮ ಸಂಶೋಧನೆಗೆ ಬಳಸಿಕೊಂಡಿದ್ದರು, ಇದರಲ್ಲಿ ನೆಮಟೋಡ್ಸ್ ವರ್ಗಕ್ಕೆ ಸೇರಿದ ಎರಡು ದುಂಡುಹುಳುಗಳು ಬದುಕಬಲ್ಲ ಲಕ್ಷಣಗಳನ್ನು ತೋರಿಸಿವೆ. ಈಗಾಗಲೇ ಆರ್ಕ್ಟಿಕ್ ವಲಯದ ಹಿಮಾವೃತ ಪ್ರದೇಶಗಳಲ್ಲಿರುವ ಬಹುಕೋಶಿಯ ಜೀವಿಗಳ ಅಂಗಾಂಶಗಳ ಬಗ್ಗೆ ಮಾಹಿತಿಯನ್ನು ವಿಶ್ಲೇಷಿಸಲಾಗುತ್ತಿದೆ ಈ ಎರಡು ಹುಳುಗಳನ್ನು 'ಐಎಫ್‌ಎಲ್ ಸೈನ್' ವೆಬ್‌ಸೈಟ್‌ನಿಂದ ಮಾಹಿತಿ ಪಡೆದು, ರಷ್ಯಾದ ಅತಿ ಶೀತವಲಯ ಪ್ರದೇಶವಾದ ಸೈಬೀರಿಯಾ ಪ್ರಾಂತ್ಯದ ಯುಕುಟಿಯಾದ ಹಿಮಾವೃತ ಕೆಳ ಭೂಸ್ತರದ ಪದರದಲ್ಲಿ ಗುರುತಿಸಿದ್ದಾರೆ. ಹುಳುಗಳನ್ನು ಹಿಮಗಡ್ಡೆಗಳಿಂದ ಬೇರ್ಪಡಿಸಿ 20 ಡಿಗ್ರಿ ಉಷ್ಣತೆಯಲ್ಲಿ ಇಟ್ಟು, ಅವುಗಳಿಗೆ ಸಮುದ್ರ ಪಾಚಿ(ಅಗರ್) ಮತ್ತು ಇ ಕೋಲಿ ಬ್ಯಾಕ್ಟೀರಿಯಾಗಳನ್ನು ಆಹಾರವಾಗಿ ನೀಡಲಾಗುತ್ತಿದೆ.

## * ಅಂತರ್‍ಜಾಲ ಬಳಕೆದಾರರ ಹೆಚ್ಚಳ



ಕಳೆದ ನಾಲ್ಕು ವರ್ಷಗಳಲ್ಲಿ ಅಂತರ್‍ಜಾಲ ಬಳಕೆದಾರರ ಸಂಖ್ಯೆ ಹೆಚ್ಚಿದೆ. ಈಗ ದೇಶದಲ್ಲಿ 47 ಕೋಟಿ ಇಂಟರ್‍ನೆಟ್ ಚಂದಾದಾರರಿದ್ದಾರೆ. ಇವರಲ್ಲಿ 32 ಕೋಟಿ ನಗರ ನಿವಾಸಿಗಳಾಗಿದ್ದರೆ ಉಳಿದವರು ಗ್ರಾಮಾಂತರ ಪ್ರದೇಶದ ನಿವಾಸಿಗಳು . ಈಶಾನ್ಯ ರಾಜ್ಯಗಳಲ್ಲಿ ಸಂಪರ್ಕ ಜಾಲವನ್ನು ಬಲಗೊಳಿಸುವ ಉದ್ದೇಶದಿಂದ 7000 ದೂರಸಂಪರ್ಕ ಗೋಪುರಗಳನ್ನು ನಿರ್ಮಿಸಲಾಗುತ್ತಿದ್ದು, ಸುಮಾರು 8600 ಗ್ರಾಮಗಳಿಗೆ ಸಂಪರ್ಕ ಕಲ್ಪಿಸಲಾಗುತ್ತದೆ ಎಂದು ದೂರಸಂಪರ್ಕ ಖಾತೆ ಸಚಿವ ಮನೋಜ್ ಸಿನ್ಹಾ ತಿಳಿಸಿದ್ದಾರೆ.

## * ಗ್ಯಾಲಾಕ್ಸಿ ಶೋಧಿಸಿದ ಪಾದ್ರಿ



* 120 ಕೋಟಿ ವರ್ಷಗಳ ಹಿಂದೆ ಮತ್ತೊಂದು ತಾರಾಪುಂಜದಲ್ಲಿ ವಿಲೀನವಾಗಿದ್ದ ಎಂ23ಪಿ. * ಭಾರತದ ಕ್ಯಾಥೋಲಿಕ್ ಪಾದ್ರಿ ಹಾಗೂ ಬಾಹ್ಯಾಕಾಶ ಸಂಶೋಧಕ ರಿಚರ್ಡ್ ಡಿಸೋಜಾ , ವಿಶಿಷ್ಟ . ಸಂಶೋಧನೆಮಾಡಿದ್ದು ತುಂಬಾ ಹಿಂದೆ ಕಳೆದುಹೋಗಿದೆ ಎಂದು ವಿಜ್ಞಾನಿಗಳು ಭಾವಿಸಿದ್ದ ಗ್ಯಾಲಾಕ್ಸಿಯ ವಿವರವನ್ನು ಪತ್ತೆ ಮಾಡಿದ್ದಾರೆ. * ಡಿಸೋಜಾ ಹಾಗೂ ಸಹ ಸಂಶೋಧಕ ಎರಿಕ್ ಬೆಲ್ ಜೊತೆಗೆ ನಡೆಸಿದ ಸಂಶೋಧನೆಯಲ್ಲಿ ಎಂ23ಪಿ ಎಂಬ ಹೆಸರಿನ ಗ್ಯಾಲಾಕ್ಸಿ. * ಇಪ್ಪತ್ತು ಕೋಟಿ ವರ್ಷಗಳ ಹಿಂದೆ ಈ ಗ್ಯಾಲಾಕ್ಷಿ ಸಮೀಪದಲ್ಲಿನ ಆಂಡ್ರೊಮಿಡಾ ಗ್ಯಾಲಾಕ್ಸಿಯಲ್ಲಿ ಲೀನವಾಗಿದೆ. ಈ ಗ್ಯಾಲಾಕ್ಸಿಯು ಮೂರನೇ ಅತಿ ದೊಡ್ಡದಾಗಿದ್ದು ಮಿಲ್ಕಿ ವೇ ಮತ್ತು ಆಂಡ್ರೊಮಿಡಾ ಒಂದು ಮತ್ತು ಎರಡನೇ ಸ್ಥಾನದಲ್ಲಿದ್ದಮ. * ಈ ವರದಿ ನೇಚರ್ ಆಸ್ಟ್ರೋನಮಿಯಲ್ಲಿ ಪ್ರಕಟವಾಗಿದೆ.

## * ಅಂತರರಾಷ್ಟ್ರೀಯ ಭೌತವಿಜ್ಞಾನ ಒಲಂಪಿಯಾಡ್‍ನಲ್ಲಿ ಭಾರತಕ್ಕೆ 5 ಚಿನ್ನ



* ಪೋರ್ಚುಗಲ್‌ನ ಲಿಸ್ಬನ್ ನಲ್ಲಿ ಈಚೆಗೆ ನಡೆದ ಅಂತರ ರಾಷ್ಟ್ರೀಯ ಭೌತಶಾಸ್ತ್ರ ಒಲಂಪಿಯಾಡ್‌ನಲ್ಲಿ ಮೊದಲ ಬಾರಿಗೆ ಭಾರತದ ಐವರು ವಿದ್ಯಾರ್ಥಿಗಳು ಚಿನ್ನದ ಪದಕಗಳನ್ನು ಗೆದ್ದಿದ್ದಾರೆ. * ಮುಂಬೈನ ಭಾಸ್ಕರ್‌ ಗುಪ್ತಾ, ರಾಜಸ್ನಾನದ ಕೋಟದ ಲೇ ಜೈನ್, ರಾಜ್ ಕೋಟ್‌ನ ನಿಶಾಂತ್ ಅಭಂಗಿ, ಜೈಪುರದ ಪವನ್ ಗೋಯಲ್ ಮತ್ತು ಕೊಲ್ಕತ್ತಾದ ಸಿದ್ದಾರ್ಥ ತಿವಾರಿ ಪದಕ ಗೆದ್ದಿರುವ ವಿದ್ಯಾರ್ಥಿಗಳು. * ಕಳೆದ 21 ವರ್ಷಗಳಲ್ಲಿ ಭಾರತದ ವಿದ್ಯಾರ್ಥಿಗಳು ಅತಿ ಹೆಚ್ಚು ಸಂಖ್ಯೆಯಲ್ಲಿ ಪದಕಗಳನ್ನು ತಮ್ಮದಾಗಿಸಿಕೊಂಡಿದ್ದಾರೆ. ಭಾರತವನ್ನು ಬಿಟ್ಟರೆ ಅತಿ ಹೆಚ್ಚು ಚಿನ್ನದ ಪದಕಗಳನ್ನು ಚೀನಾದ ವಿದ್ಯಾರ್ಥಿಗಳು ಗೆದ್ದಿದ್ದಾರೆ. * ಈ ಸ್ಪರ್ಧೆಯಲ್ಲಿ ವಿವಿಧ ದೇಶಗಳ 396 ವಿದ್ಯಾರ್ಥಿಗಳು ಭಾಗವಹಿಸಿದ್ದರು.ಈ ಪೈಕಿ 42 ವಿದ್ಯಾರ್ಥಿಗಳು ಚಿನ್ನದ ಪದಕಗಳನ್ನು ಗೆದ್ದಿದ್ದಾರೆ. ಅತ್ಯಂತ ಕಠಿಣ ಸ್ಪರ್ಧೆಯ ಮೂಲಕ ಹೋಮಿ ಬಾಬಾ ಕೇಂದ್ರ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿತ್ತು. ವಿಜೇತ ವಿದ್ಯಾರ್ಥಿಗಳನ್ನು ಹೊಮಿ ಬಾಬಾ ಕೇಂದ್ರ ಸನ್ಮಾನಿಸಿತು.

## * 44 ವರ್ಷಗಳ ಬಳಿಕ ವಿಶ್ವಕಪ್ ನಾಕೌಟ್‌ಗೆ ಭಾರತ



* ವಿಶ್ವ ನಂ.7 ಅಮೆರಿಕ ವಿರುದ್ಧದ ಅಂತಿಮ ಲೀಗ್ ಪಂದ್ಯವನ್ನು 1-1 ಗೋಲುಗಳಿಂದ ಡ್ರಾ ಮಾಡಿಕೊಂಡ ಭಾರತ ಮಹಿಳಾ ತಂಡ 14ನೇ ಆವೃತ್ತಿಯ ಹಾಕಿ ವಿಶ್ವಕಪ್ ಟೂರ್ನಿಯಲ್ಲಿ ನಾಕೌಟ್ ಹಂತಕ್ಕೇರಿದೆ. * 1974ರ ನಂತರ ಭಾರತ ತಂಡ ಮೊದಲ ಬಾರಿಗೆ ಲೀಗ್ ಹಂತದಿಂದ ಮೇಲೇರುವಲ್ಲಿ ಯಶ ಕಂಡಿತು. * 1974ರ ಟೂರ್ನಿಯಲ್ಲಿ ನಾಲ್ಕನೇ ಸ್ಥಾನ ಪಡೆದಿದ್ದ ಭಾರತ ಆ ಬಳಿಕ ಆಡಿದ ಐದೂ ಟೂರ್ನಿಗಳಲ್ಲಿ ಲೀಗ್ ಹಂತದಲ್ಲಿಯೇ ನಿರ್ಗಮಿಸಿತ್ತು. ಇದರಿಂದ 3ನೇ ಸ್ಥಾನದೊಂದಿಗೆ ಪ್ಲೇ ಆಫ್ ಗೇರಿರುವ ಭಾರತ, ಕ್ವಾರ್ಟರ್ ಫೈನಲ್ ಸ್ಥಾನಕ್ಕಾಗಿ ವಿಶ್ವ ರಾಂಕಿಂಗ್ ನಲ್ಲಿ (□□□□□□□□) 17ನೇ ಸ್ಥಾನದಲ್ಲಿರುವ ಇಟಲಿಯನ್ನು ಎದುರಿಸಲಿದೆ.

## * ಸರ್ವಾಧಿಕ ಸಿಕ್ಸರ್‌: ವಿಶ್ವದಾಖಲೆ ಸರಿದೂಗಿಸಿದ ಕ್ರಿಸ್ ಗೇಲ್




* ವೆಸ್ಟ್ ಇಂಡೀಸ್‌ನ ಸ್ಫೋಟಕ ಬ್ಯಾಟ್ಸ್ ಮ್ಯಾನ್ ಕ್ರಿಸ್ ಗೇಲ್ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಸರ್ವಾಧಿಕ ಸಿಕ್ಸರ್ ಬಾರಿಸಿದ ಪಾಕಿಸ್ತಾನದ ಶಾಹಿದ್ ಅಫ್ರಿದಿ ಅವರ ವಿಶ್ವದಾಖಲೆಯನ್ನು ಸರಿದೂಗಿಸಿದ್ದಾರೆ. * ಬಾಂಗ್ಲಾದೇಶ ವಿರುದ್ಧ ಇಲ್ಲಿ ನಡೆದ 3ನೇ ಏಕದಿನ ಪಂದ್ಯದಲ್ಲಿ ಕ್ರಿಸ್ ಗೇಲ್ ಅಂತರರಾಷ್ಟ್ರೀಯ ಕ್ರಿಕೆಟಿನ 476ನೇ ಸಿಕ್ಸರ್ ಬಾರಿಸಿದರು. ಅಫ್ರಿದಿ ಕೂಡ ಇಷ್ಟೇ ಸಿಕ್ಸರ್ ಬಾರಿಸಿ ವಿಶ್ವದಾಖಲೆ ನಿರ್ಮಿಸಿದ್ದರು. ಆದರೆ ಅಫ್ರಿದಿ ಇದಕ್ಕಾಗಿ 524 ಪಂದ್ಯಗಳನ್ನಾಡಿದರೆ, ಗೇಲ್ ಕೇವಲ 443 ಪಂದ್ಯಗಳಲ್ಲಿ ವಿಶ್ವದಾಖಲೆ ಸರಿದೂಗಿಸಿದ್ದು ವಿಶೇಷ ಅಫ್ರಿದಿ ಏಕದಿನದಲ್ಲಿ 351 ಸಿಕ್ಸರ್, ಟಿ ಟ್ವೆಂಟಿಯಲ್ಲಿ 73 ಸಿಕ್ಸರ್, ಟೆಸ್ಟ್ ಕ್ರಿಕೆಟ್‌ನಲ್ಲಿ 52 ಸಿಕ್ಸರ್ ಬಾರಿಸಿದ್ದಾರೆ. * ಗೇಲ್ ಏಕದಿನದಲ್ಲಿ 275, ಟಿ20ಯಲ್ಲಿ 103 ಹಾಗೂ ಟೆಸ್ಟ್ ಕ್ರಿಕೆಟ್‌ನಲ್ಲಿ 98 ಸಿಕ್ಸರ್ ಸಿಡಿಸಿದ್ದಾರೆ. * ಭಾರತೀಯ ಸಿಕ್ಸರ್ ದಾಖಲೆ ಮಹೇಂದ್ರ ಸಿಂಗ್ ಧೋನಿ ಹೆಸರಲ್ಲಿದೆ (504 ಪಂದ್ಯಗಳಿಂದ 342 ಸಿಕ್ಸರ್). ಈ ಹಾದಿಯಲ್ಲಿ ಅವರಿಗೆ 5ನೇ ಸ್ಥಾನ.

## * 18 ಎಸೆತಗಳಲ್ಲಿ ಸ್ಮೃತಿ 50



ಭಾರತ ಮಹಿಳಾ ಕ್ರಿಕೆಟ್ ತಂಡದ ಸ್ಮೃತಿ ಮಂದಾನ ಟ್ವೆಂಟಿ-20 ಟೂರ್ನಿಯಲ್ಲಿ ಅತಿವೇಗದ ಅರ್ಧಶತಕದ ದಾಖಲೆ ಸರಿಗಟ್ಟಿದ್ದರು. ವೆಸ್ಟರ್ನ್ ಸ್ಟಾರ್ಮ್ ಮತ್ತು ಲಾಗ್‌ಬರ್ಗ್ ಲೈಟಿಂಗ್ ತಂಡಗಳ ನಡುವಿನ ಕಿಯಾ ಸೂಪರ್ ಲೀಗ್ ಟೂರ್ನಿಯ ಪಂದ್ಯದಲ್ಲಿ ಅವರು ಈ ಸಾಧನೆ ಮಾಡಿದರು. ವೆಸ್ಟರ್ನ್ ಸ್ಟಾರ್ಮ್ ಪರವಾಗಿ ಆಡಿದ ಮಂದಾನ 18 ಎಸೆತಗಳಲ್ಲಿ ಅರ್ಧಶತಕ ಗಳಿಸಿದರು. ನ್ಯೂಜಿಲ್ಯಾಂಡ್ ನ ಸೋಫಿ ಡಿವೈನ್ ಕೂಡ ಇಷ್ಟೇ ಎಸೆತಗಳಲ್ಲಿ 50 ರನ್ ಗಳಿಸಿದ್ದರು. 19 ಎಸೆತಗಳಲ್ಲಿ 52ರನ್ ಗಳಿಸಿದ ಮಂದಾನ, ಒಟ್ಟು ನಾಲ್ಕು ಸಿಕ್ಸರ್ ಮತ್ತು ಐದು ಬೌಂಡರಿಗಳನ್ನು ಸಿಡಿಸಿದರು. ಪಂದ್ಯದಲ್ಲಿ ವೆಸ್ಟರ್ನ್ ಸ್ವಾರ್ಮ್ 18 ರನ್‌ಗಳಿಂದ ಗೆದ್ದಿತು.